# 1 ನೇ ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ ಶಿರಸಿ

## ಸತ್ಯ ಪ್ರತಿಜ್ಞೆಯ ಮೇರೆಗೆ ಃ ದಿನಾಂಕ ಃ 04.02.2020

| | | |
|---|---|---|
| ಸಾಕ್ಷಿದಾರರ ಹೆಸರು | - | ಮಂಜುಳಾ ನಾಯ್ಕ |
| ಗಂಡನ ಹೆಸರು | - | ಸಂದೀಪ ನಾಯ್ಕ |
| ವಯಸ್ಸು | - | 36 ವರ್ಷ |
| ಉದ್ಯೋಗ | - | ಕಂದಾಯ ನಿರೀಕ್ಷಕರು ಬನವಾಸಿ |
| ವಾಸ್ತವ್ಯ | - | ಬನವಾಸಿ. |

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ**

ನಾನು ಶಿರಸಿಯ ನಗರ ಸಭೆಯಲ್ಲಿ 2008 ರಿಂದ 2015 ರವರೆಗೆ ತಹಶೀಲ್ದಾರ ಕಛೇರಿ, ಶಿರಸಿಯಲ್ಲಿ ಎಸ್.ಡಿ.ಸಿ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈಗ ತೋರಿಸಿದ ದಿನಾಂಕ 03.12.2014 ರ ಪಂಚನಾಮೆಯಲ್ಲಿರುವ ಸಹಿ ನನ್ನದೇ. 2 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದ ಸಿಸಿ ನಂಃ416/2019 ರಲ್ಲಿ ನಿ.ಪಿ. 15 ಎಂದು ಈಗಾಗಲೇ ಗುರುತಿಸಿರುವ ಮೂಲ ಪಂಚನಾಮೆಯನ್ನು ಈ ಪ್ರಕರಣದಲ್ಲಿ ತರಿಸಿಕೊಂಡಿದ್ದು ಇದನ್ನು ಈ ಪ್ರಕರಣದ ನಿ.ಪಿ. 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ಈ ಸಹಿಯನ್ನು ನಾನು ದಿನಾಂಕ 03.12.2014 ರಂದು ಮಾಡಿರುತ್ತೇನೆ. ಆ ದಿನ ಪೋಲೀಸರು ನನ್ನನ್ನು ಮತ್ತು ಚಾ.ಸಾ. 4 ರವರನ್ನು ಸರ್ಕಾರಿ ಪಂಚರನ್ನಾಗಿ ಬರಲು ಠಾಣೆಗೆ ಕರೆಸಿಕೊಂಡಿದ್ದರು. ನಾವು ಠಾಣೆಗೆ ಹೋದಾಗ ಅಲ್ಲಿ ಇಬ್ಬರು ಆರೋಪಿಗಳು ಇದ್ದರು . ಅವರ ಹೆಸರುಗಳು ಮಂಜುನಾಥ ಅಗಸ್ತ್ಯನವರ್ ಮತ್ತು ಮಂಜುನಾಥ ಗವಾಡಿ ಎಂದು ತಿಳಿಸಿದರು . ಈಗ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿರುವ ಆರೋಪಿಗಳು ಅವರೇ ಆಗಿರುತ್ತಾರೆ.

ಆರೋಪಿಗಳು ಕಳ್ಳತನದಲ್ಲಿ ಭಾಗಿಯಾಗಿರುವುದಾಗಿ ತಿಳಿಸಿ ಅವರು ತೋರಿಸುವ ಸ್ಥಳಗಳಲ್ಲಿ ಪಂಚನಾಮೆ ಮಾಡಲು ನಮ್ಮನ್ನು ಸರ್ಕಾರಿ ಪಂಚರನ್ನಾಗಿ ಇರಲು ಕೇಳಿಕೊಂಡರು. ನಾವು ಒಪ್ಪಿದೆವು. ಆಗ ಪೋಲೀಸರು ಆರೋಪಿಗಳು ಹೇಳಿದ ಕಡೆಗೆ ನಮ್ಮನ್ನು ಆರೋಪಿಗಳೊಂದಿಗೆ ಪೋಲೀಸ್ ಜೀಪಿನಲ್ಲಿ ಕರೆದುಕೊಂಡು ಹೊರಟರು . ಮೊದಲು ಹಾರುಗಾರ ಎಂಬಲ್ಲಿಗೆ ಒಂದು ಕ್ರಿಶ್ಚಿಯನ್ ಸ್ಮಶಾನದ ಎದುರು ಕರೆದುಕೊಂಡು ಹೋಗಿ ಒಂದು ಮನೆಯನ್ನು ತೋರಿಸಿ ಅಲ್ಲಿ ಕಳ್ಳತನ

ಮಾಡಿರುವುದಾಗಿ ಆರೋಪಿಗಳು ಹೇಳಿದರು. ಬಾಗಿಲು ಒಡೆದು ನಂತರ ಹಾಲ್‌ನಿಂದ ಹೋಗಿ ಒಂದು ಅಲ್ಮೇರಾ ತೋರಿಸಿ ಅದನ್ನು ಒಡೆದು ಕಳ್ಳತನ ಮಾಡಿರುವುದಾಗಿ ಹೇಳಿದರು.

ನಂತರ ಅಲ್ಲಿಂದ ಅರ್ಬನ್ ಬ್ಯಾಂಕ್ ಹತ್ತಿರ ಇರುವ ಜವಳಿ ರೈಸ್ ಮಿಲ್ ಹತ್ತಿರ ಒಂದು ಆರ್.ಸಿ.ಸಿ. ಮನೆಗೆ ಆರೋಪಿಗಳು ತೋರಿಸಿದ ದಾರಿಯಲ್ಲಿ ಕರೆದುಕೊಂಡು ಹೋದರು. ಆ ಮನೆ ಮೊದಲನೇ ಮನೆ ಆರ್.ಸಿ.ಸಿ. ಮನೆಯಾಗಿತ್ತು. ಅಲ್ಲಿ ಆರೋಪಿಗಳು ತಾವು ಬಾಗಿಲು ಹೇಗೆ ಒಡೆದು ಬೆಡ್ ರೂಮ್ ಒಳಗೆ ಹೋಗಿ ಒಂದು ಟ್ರಜರಿ ತೋರಿಸಿ ಅಲ್ಲಿಂದ ಒಂದು ಚೈನ್ ಕಳ್ಳತನ ಮಾಡಿರುವುದಾಗಿ ಹೇಳಿದರು. ಆ ಮನೆಯಲ್ಲಿ ಸುರೇಖಾ ಬಿಸ್ಟನ್‌ವರ್ ಎಂಬುವವರು ಇದ್ದರು.

ನಂತರ ಅಲ್ಲೇ ಹತ್ತಿರ ಮುಂದೆ ಎಡಕ್ಕೆ ಹೋಗಿ ಒಂದು ಆರ್ .ಸಿ.ಸಿ. ಮನೆಯನ್ನು ತೋರಿಸಿ ಅಲ್ಲೂ ಸಹ ಕಳ್ಳತನ ಮಾಡಿರುವುದಾಗಿ ಹೇಳಿದರು. ಆ ಮನೆ ಮೊದಲನೇ ಮಹಡಿಯಲ್ಲಿದ್ದು ಅಲ್ಲಿ ಮೊದಲು ಬಾಡಿಗೆಗೆ ಇದ್ದವರು ಈಗ ಇಲ್ಲ ಎಂದು ತಿಳಿಸಿದರು. ಆ ಮನೆಯಲ್ಲಿ ಯಾರೂ ಇರಲಿಲ್ಲ.

ನಂತರ ಆರೋಪಿಗಳು ಕೆ.ಹೆಚ್.ಬಿ. ಕಾಲೋನಿಯ ಒಂದು ಮನೆಯ ಹತ್ತಿರ ಕರೆದುಕೊಂಡು ಹೋಗಿ ಆ ಮನೆಯ ಹಿಂಬಾಗಿಲು ಒಡೆದು ಅಲ್ಲಿ ಒಂದು ತಗಡು ಶೀಟ್ ಇದ್ದು , ಅದನ್ನು ಒಡೆದು ಆ ಮನೆಯಲ್ಲಿ ನಗದು ಹಣ ಕಳ್ಳತನ ಮಾಡಿರುವುದಾಗಿ ಹೇಳಿದರು . ಆ ಮನೆಯಲ್ಲಿ ಒಬ್ಬರು ಮಹಿಳೆ ಇದ್ದು ಆರೋಪಿಗಳು ತಾವು ಮನೆಯ ಒಳಗೆ ಕಳ್ಳತನ ಮಾಡಿದ್ದ ಜಾಗವನ್ನು ಮತ್ತು ಒಂದು ಬಾಕ್ಸನ್ನು ತೋರಿಸಿದರು.

ನಂತರ ಕಳ್ಳತನ ಮಾಡಿದ ವಸ್ತುಗಳನ್ನು ಏನು ಮಾಡಿದಿರಿ ಎಂದು ಪೋಲೀಸರು ಕೇಳಿದಾಗ ಆರೋಪಿಗಳು ಅಲ್ಲಿಂದ ದೇವಿಕೆರೆ ಹತ್ತಿರ ಭೂತರಾಯನ ಕಟ್ಟೆಯ ಬಳಿ ಒಂದು ಮಾರಿಕಾಂಬಾ ಜ್ಯುವೆಲರಿ ಶಾಪನ್ನು ತೋರಿಸಿ ಅಲ್ಲಿ ಮಾರಾಟ ಮಾಡಿರುವುದಾಗಿ ತಿಳಿಸಿದರು . ಅದು ನಾವು ಹೋದಾಗ ಬಾಗಿಲು ಹಾಕಿತ್ತು. ನಂತರ ಆರೋಪಿಗಳು ಇನ್ನೊಂದು ಬಂಗಾರದ ಅಂಗಡಿ ಸುವರ್ಣ ಜ್ಯುವೆಲರ್ಸ್ ನ್ನು ತೋರಿಸಿದರು. ಆ ಅಂಗಡಿ ಸಹ ಬಾಗಿಲು ಹಾಕಿತ್ತು. ಪೋಲೀಸರು ಅಲ್ಲಿ ಮಹಜರ್ ಮಾಡಿ ನಮ್ಮ ಸಹಿ ಪಡೆದುಕೊಂಡರು. ಸಾಕ್ಷಿಯು ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಿರುವ 1 ಮತ್ತು 2 ನೇ ಆರೋಪಿಗಳನ್ನು ನೋಡಿ ಗುರುತಿಸಿ ಇದೇ ಆರೋಪಿಗಳನ್ನು ಆ ದಿನ ಪೋಲೀಸರು ತೋರಿಸಿದ್ದು ಈ ಆರೋಪಿಗಳೇ ಕಳ್ಳತನ ಮಾಡಿರುವ ಜಾಗಗಳನ್ನು ತೋರಿಸಿದ್ದರು ಎಂದು ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀಮತಿ ಜೆ.ಕೆ.ಎನ್. ವಕೀಲರಿಂದಃ**

ಪೋಲೀಸರು ನನ್ನನ್ನು ಪಂಚನಾಮೆಗೆ ಕರೆದ ದಿನಾಂಕ 03.12.20114. ಪೋಲೀಸರು ಬಂದು ಕರೆದಾಗ ನಾನು ಕಛೇರಿಯಲ್ಲೇ ಇದ್ದೆ. ಪೋಲೀಸರು ಬಂದು ಕರೆದಾಗ ಸಮಯ 1.30 ಆಗಿತ್ತು. ನಂತರ ನಾನು ಶಿರಸ್ತೇದಾರ ಮತ್ತು ತಹಶೀಲ್ದಾರ ಇವರನ್ನು ಕೇಳಿ ಪೋಲೀಸ್ ಠಾಣೆಗೆ ಹೊರಡುವಾಗ ಮಧ್ಯಾಹ್ನ ಸುಮಾರು 2.30 ರಿಂದ 3.00 ಗಂಟೆ ಆಗಿತ್ತು. ಠಾಣೆಯಿಂದ ಒಬ್ಬರು ಪೋಲೀಸ್ ಸಿಬ್ಬಂದಿ ಬಂದು ಶಿರಸ್ತೇದಾರ ಇವರನ್ನು ಕೇಳಿದ್ದರು . ಅವರು ಮಹಿಳಾ ಪೋಲೀಸರಾಗಿರಲಿಲ್ಲ. ಅವರ ಹೆಸರು ಹೇಳಲು ಆಗುವುದಿಲ್ಲ. ನಾನು ಪೋಲೀಸ್ ಜೀಪ್ ಹತ್ತಿದಾಗ ಜೀಪನಲ್ಲಿ ಪೋಲೀಸರು, ಇಬ್ಬರು ಆರೋಪಿಗಳು ಮತ್ತು ಚಾ.ಸಾ. 4 ರವರು ಇದ್ದರು. ಜೀಪಿನಲ್ಲಿ ಯಾವುದೇ ಮಹಿಳಾ ಪೋಲೀಸರು ಇರಲಿಲ್ಲ . ನಾನು ನನ್ನ ಸ್ಕೂಟಿಯಲ್ಲಿ ನಮ್ಮ ಕಛೇರಿಯಿಂದ ಪೋಲೀಸ್ ಠಾಣೆಗೆ ಹೋದೆ. ಠಾಣೆಯಿಂದ ನಾನು ಜೀಪು ಹತ್ತಿದೆ . ಠಾಣೆಗೆ ಹೋದಾಗ ಆರೋಪಿಗಳು ಇದ್ದು ಅವರನ್ನು ತೋರಿಸಿ ಅವರು ತೋರಿಸಿದ ಜಾಗದಲ್ಲಿ ಪಂಚನಾಮೆ ಮಾಡಬೇಕಾಗಿರುವುದರಿಂದ ಸಾಕ್ಷಿಯಾಗಿ ಇರಲು ಕೇಳಿದರು . ನಾನು ಒಪ್ಪಿದೆ. ನಂತರ ನನ್ನ ಸ್ಕೂಟಿಯನ್ನು ಠಾಣೆಯಲ್ಲೇ ಬಿಟ್ಟು ಜೀಪಿನಲ್ಲಿ ಅವರೊಂದಿಗೆ ಹೋದೆ . ಮೊದಲು ಆರೋಪಿ ತೋರಿಸಿದ ಜಾಗದಲ್ಲಿ ಹಿಪ್ಪನಳ್ಳಿ ಕಡೆಗೆ ಹೋಗಿ ಹಾರುಗಾರ ಎಂಬಲ್ಲಿ ಒಂದು ಸ್ಮಶಾನದ ಎದುರು ಮನೆಯ ಹತ್ತಿರ ಆರೋಪಿಗಳು ತೋರಿಸಿದಂತೆ ಹೋಗಿ ಅಲ್ಲಿ ಜೀಪ್ ನಿಲ್ಲಿಸಿದರು . ಆಗ ಸಮಯ ಸುಮಾರು 3.30 ಗಂಟೆ ಆಗಿರಬಹುದು. ಅಲ್ಲಿ ಇಳಿದಾಗ ಪೋಲೀಸರು ಮೊದಲು ಆರೋಪಿಗಳನ್ನು ಮುಂದೆ ಕಳುಹಿಸಿ ಏನು ಮಾಡಿದ್ದೀರಿ ತೋರಿಸಿ ಎಂದು ಕೇಳಿದರು . ಆರೋಪಿಗಳು ಮನೆಯ ಬಾಗಿಲು ಒಡೆದು ಒಳಗೆ ಒಂದು ಕಪಾಟು ಒಡೆದು ಕಳ್ಳತನ ಮಾಡಿರುವುದಾಗಿ ತೋರಿಸಿದರು . ಅಲ್ಲಿ ಎಲ್ಲರನ್ನೂ ನಿಲ್ಲಿಸಿ ಒಂದು ಫೋಟೋ ತೆಗೆದರು . ನಂತರ ಅಲ್ಲಿಂದ ಬಂದೆವು. ಪೋಲೀಸರು ಫೋಟೋ ತೆಗೆದರು. ಯಾವುದರಿಂದ ಫೋಟೋ ತೆಗೆದರು ಎಂದು ನನಗೆ ಸರಿಯಾಗಿ ನೆನಪಿಲ್ಲ. ಆ ಮನೆ ಆರ್.ಸಿ.ಸಿ. ಮನೆಯಾಗಿತ್ತು. ಆ ಮನೆ ಕೇವಲ ನೆಲ ಮಹಡಿ ಮಾತ್ರ ಇರುವ ಮನೆಯಾಗಿತ್ತು. ಮನೆಯ ಮುಖ್ಯ ದ್ವಾರ ರಸ್ತೆಗೆ ಮುಖವಾಗಿ ಇತ್ತು . ಸ್ವಲ್ಪ ದೂರದಲ್ಲಿ ಬಲಭಾಗದಲ್ಲಿ ಒಂದು ಮನೆ ಇತ್ತು. ಮನೆಯ ಎದುರುಗಡೆಯೇ ಸ್ಮಶಾನ ಇತ್ತು. ಬಲಭಾಗದಲ್ಲಿ ಇದ್ದ ಮನೆ ಸ್ವಲ್ಪ ದೂರದಲ್ಲಿ ಇತ್ತು, ಕೂಗಿದರೆ ಕೇಳುವಷ್ಟು ಹತ್ತಿರದಲ್ಲಿ ಇರಲಿಲ್ಲ.

ಅಲ್ಲಿಂದ ಮುಖ್ಯ ರಸ್ತೆಗೆ ಬಂದು ಮುಂದೆ ಬಲಭಾಗಕ್ಕೆ ತಿರುಗಿ ಸ್ವಲ್ಪ ದೂರ ಹೋಗಿ ಪುನಃ ಬಲಕ್ಕೆ ತಿರುಗಿದಾಗ ಒಂದು ರಸ್ತೆಯಲ್ಲಿ ಜವಳಿ ರೈಸ್ ಮಿಲ್ ಹತ್ತಿರ ಒಂದು ಮನೆಯ ಬಳಿ ಹೋದೆವು. ಅದು ಯಾವ ರಸ್ತೆ ಎಂದು ಹೇಳಲು ಬರುವುದಿಲ್ಲ. ಅಲ್ಲಿಗೆ ಬರುವಾಗ ಸುಮಾರು 4.15

ಆಗಿತ್ತು. ಅಲ್ಲಿ 2 ನೇ ಆರ್.ಸಿ.ಸಿ. ಮನೆಯನ್ನು ತೋರಿಸಿ ಅಲ್ಲಿ ಕಳುವು ಮಾಡಿರುವುದಾಗಿ ತೋರಿಸಿದರು. ಆ ಮನೆ ಇರುವ ಜಾಗ ಜನನಿಬಿಡ ಪ್ರದೇಶ ಅಂದರೆ ಸುತ್ತ ಮುತ್ತ ಮನೆಗಳು ಇದ್ದು ಜನರು ಓಡಾಡುವ ಪ್ರದೇಶ ಎಂದರೆ ಸರಿ . ಅಲ್ಲಿ ಒಂದು ರೈಸ್ ಮಿಲ್ ಸುಮಾರು 1 ಎಕರೆ ಪ್ರದೇಶದಲ್ಲಿ ಇದೆ ಎಂದರೆ ಸರಿ. ಆ ರೈಸ್ ಮಿಲ್ ಹಿಂಭಾಗಕ್ಕೆ ಈ ಮನೆ ಇದೆ. ಪೋಲೀಸರು ಮೊದಲು ಆರೋಪಿಗಳನ್ನು ಕಳುಹಿಸಿದರು. ಅವರು ಮನೆಯ ಒಳಗೆ ಹೋಗಿ ಹಾಲ್, ಡೈನಿಂಗ್ ಹಾಲ್ ನಂತರ ಬೆಡ್ ರೂಮ್ ಗೆ ಹೋಗಿ ಅಲ್ಲಿ ಗೋಡೆಯ ಕಡೆಗೆ ಇದ್ದ ಕಪಾಟು ತೋರಿಸಿ ಅದರೊಳಗೆ ಇದ್ದ ಲಾಕರ್ ಒಡೆದು ಚೈನ್ ಕಳ್ಳತನ ಮಾಡಿರುವುದಾಗಿ ಹೇಳಿದರು . ಆ ಮನೆಯಲ್ಲಿ ಒಬ್ಬರು ಅಜ್ಜಿ, ಮಹಿಳೆ ಮತ್ತು ಒಂದು ಮಗು ಇತ್ತು. ಅವರು ಮನೆಯಲ್ಲಿ ಚೈನ್ ಕಳ್ಳತನವಾಗಿತ್ತು ಎಂದು ಹೇಳಿದರು. ಅಲ್ಲೂ ಸಹ ಒಂದು ಫೋಟೋ ತೆಗೆದರು . ಪೋಲೀಸರೇ ಫೋಟೋ ತೆಗೆದರು. ಯಾವುದರಿಂದ ತೆಗೆದರು ಎಂದು ನನಗೆ ನೆನಪಿಲ್ಲ . ಬಾಗಿಲಿನಿಂದ ಒಳಗೆ ಹೋದರೆ ಆ ಕೋಣೆಯ ಎಡಭಾಗಕ್ಕೆ ಕಪಾಟು ಇತ್ತು. ನಾವು ಹೋದಾಗ ಕಪಾಟು ಮುಚ್ಚಿತ್ತು. ಅವರೇ ತೆಗೆದು ತೋರಿಸಿದರು. ಒಳಗೆ ಲಾಕರ್ ನ ಬೀಗ ಮುರಿದಿದೆ ಎಂದು ತೋರಿಸಿದರು.

ಅಲ್ಲಿಂದ ಸ್ವಲ್ಪ ಮುಂದೆ ಬಂದು ಎಡಗಡೆಗೆ ತಿರುಗಿ ಬಲಭಾಗದಲ್ಲಿ ಇದ್ದ ಇನ್ನೊಂದು ಮನೆಯನ್ನು ತೋರಿಸಿದರು. ಆ ಮನೆಯೂ ಸಹ ಬಾಡಿಗೆ ಮನೆ ಆಗಿತ್ತು . ಅದು 1 ನೇ ಮಹಡಿಯಲ್ಲಿದ್ದ ಮನೆ ಆಗಿತ್ತು. ಅಲ್ಲಿ ಬಾಡಿಗೆಗೆ ಇದ್ದವರು ಖಾಲಿ ಮಾಡಿದ್ದರು. ನಾವು ಹೋದಾಗ ಆ ಮನೆಯಲ್ಲಿ ಯಾರೂ ಇರಲಿಲ್ಲ. ಆ ಮನೆಯನ್ನು ಆರೋಪಿಗಳೇ ತೋರಿಸಿದರು. ನಾನು 4-5 ಮೆಟ್ಟಿಲು ಮೇಲೆ ಹೋದೆ. ಆ ಮನೆಯಲ್ಲಿ ಯಾರೂ ಇರಲಿಲ್ಲ. ಮನೆ ಮಾಲೀಕರು ಬಾಗಿಲು ತೆರೆದು ತೋರಿಸಿದರು. ಮನೆಯನ್ನು ನೋಡಿ ವಾಪಸ್ಸು ಬಂದೆವು. ನಾನು ಮೆಟ್ಟಿಲು ಹತ್ತಿ ಮೇಲೆ ಹೋಗಿ ಮನೆಯ ಮುಂಭಾಗ ನೋಡಿ ಬಂದೆ. ಮನೆಯ ಒಳಗೆ ಆರೋಪಿಗಳು, ಪೋಲೀಸರು ಮತ್ತು ಚಾ.ಸಾ. 4 ರವರು ಹೋಗಿದ್ದರು. ಆರೋಪಿಗಳು ಎಲ್ಲಿ ಕಳುವು ಮಾಡಿರುವುದಾಗಿ ಜಾಗ ತೋರಿಸುತ್ತಿದ್ದರು. ನಾನು ಮುಂಭಾಗದಲ್ಲೇ ಇದ್ದೆ. ಆರೋಪಿಗಳು ಜಾಗ ತೋರಿಸುವಾಗ ನಾನು ಆ ಜಾಗದಲ್ಲಿ ಇರಲಿಲ್ಲ. ಆರೋಪಿಗಳು ಮನೆಯ ಒಳಗೆ ಹೇಗೆ ಬಂದೆವು ಎಂದು ತೋರಿಸಿದರು . ಸುಮಾರು 10 ನಿಮಿಷ ಆ ಮನೆಯ ಒಳಗೆ ಇದ್ದರು. ಅಲ್ಲೂ ಒಂದು ಫೋಟೋ ತೆಗೆದು ಪುನಃ ಕೆಳಗೆ ಬಂದೆವು.

ಪುನಃ ಅಲ್ಲಿಂದ ಜೀಪು ಹತ್ತಿ ಮುಖ್ಯ ರಸ್ತೆ ಹುಬ್ಬಳ್ಳಿ ರಸ್ತೆಗೆ ಬಂದು ಕೆ .ಹೆಚ್.ಬಿ. ಕಾಲೋನಿಗೆ ಬಂದೆವು. ಅಲ್ಲಿಗೆ ಬರುವಾಗ ಸುಮಾರು ಅಂದಾಜು 5.00 ಗಂಟೆ ಆಗಿತ್ತು. ಅಲ್ಲಿ ಒಂದು ಹಂಚಿನ ಮನೆ ತೋರಿಸಿ ಆರೋಪಿಗಳು ಗೇಟು ತೆಗೆದು ಹಿಂಬಾಗಿಲಿನ ಕಡೆಗೆ ಹೋಗಿ ಅಲ್ಲಿ ಒಂದು ತಗಡಿನ

ಶೀಟ್ ಹೊಡೆದಿತ್ತು. ಅದನ್ನು ಒಡೆದು ಒಳಗೆ ಹೋಗಿರುವುದಾಗಿ ಆರೋಪಿಗಳು ಹೇಳಿದರು . ಆ ಮನೆಯಲ್ಲಿ ಒಬ್ಬರು ಮಧ್ಯ ವಯಸ್ಸಿನ ಮಹಿಳೆ ಇದ್ದು ಮನೆಯಲ್ಲಿ ಯಾವುದೋ ವಿಚಾರಕ್ಕೆ ಇಟ್ಟಿದ್ದ ಹಣ ಕಳ್ಳತನ ಆಗಿದೆ ಎಂದು ಹೇಳುತ್ತಿದ್ದರು. ಎಷ್ಟು ಹಣ ಎಂದು ಹೇಳಲಿಲ್ಲ. ಕೆ.ಹೆಚ್.ಬಿ. ಕಾಲೋನಿ ಅಂದರೆ ಅತ್ಯಂತ ಜನನಿಬಿಡ ಪ್ರದೇಶ ಮತ್ತು ಮನೆಗಳು ಹತ್ತಿರ ಇದ್ದು ಯಾವಾಗಲೂ ಜನ ಓಡಾಡುತ್ತಿರುತ್ತಾರೆ ಎಂದರೆ ಸರಿ. ಅಲ್ಲಿ ಸುಮಾರು 10 ನಿಮಿಷ ಇದ್ದೆವು.

ಅಲ್ಲಿಂದ ಪೋಲೀಸರು ಬಂಗಾರವನ್ನು ಎಲ್ಲಿ ಇಟ್ಟಿದ್ದೀರಿ ಎಂದು ಕೇಳಿದಾಗ ಅವರು ಜೀಪು ಹತ್ತಿ ದೇವಿಕೆರೆ ಹತ್ತಿರ ಬೂತಪ್ಪನ ಕಟ್ಟೆಯ ಹತ್ತಿರ ಇರುವ ಮಾರಿಕಾಂಬಾ ಜ್ಯುವೆಲರ್ಸ್ ಬಳಿ ಬಂದು ಅಲ್ಲಿ ಕೊಟ್ಟಿರುವುದಾಗಿ ಹೇಳಿದರು.

ನಾನು ಆ ದಿನ ಕರ್ತ್ಯವ್ಯದಲ್ಲಿ ಇದ್ದಾಗ ಪೋಲೀಸರು ಬಂದು ಕರೆದಿದ್ದರು ಮತ್ತು ನಾನು ಈ ಎಲ್ಲಾ ಸ್ಥಳಗಳಿಗೆ ಹೋಗಿದ್ದೆ ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ . ನಾನು ಆ ದಿನ ಕರ್ತವ್ಯದಲ್ಲಿ ಇದ್ದೆ ಎಂದು ಹೇಳುವ ವಿಚಾರ ಸಹ ಸುಳ್ಳು ಎಂದರೆ ಸರಿಯಲ್ಲ. ಅಲ್ಲಿಂದ ಮಾರಿಕಾಂಬಾ ಜ್ಯುವೆಲರ್ಸ್ ಹತ್ತಿರ ಬಂದೆವು ಎಂಬ ವಿಚಾರ ಸಹ ಸುಳ್ಳು ಎಂದರೆ ಸರಿಯಲ್ಲ . ಆರೋಪಿಗಳೇ ಅಲ್ಲಿಗೆ ಕರೆದುಕೊಂಡು ಬಂದಿದ್ದರು. ಅಲ್ಲಿಂದ ಸುವರ್ಣ ಜ್ಯುವೆಲರ್ಸ್ ಹತ್ತಿರ ಬಂದೆವು ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ . ಅಲ್ಲಿಗೆ ಬಂದಾಗ ಠಾಣೆಯಿಂದ ಯಾರು ಯಾರು ಹೊರಟಿದ್ದೆವೋ ಅವರೆಲ್ಲರೂ ಇದ್ದೆವು.

ನಮ್ಮ ಕಛೇರಿಗೆ ಪೋಲೀಸರು ಯಾವುದಾದರೂ ಕೆಲಸಕ್ಕೆ ಬರುತ್ತಿರುತ್ತಾರೆ ಎಂದರೆ ಸರಿ . ಸಾಮಾನ್ಯವಾಗಿ ಅವರ ಪರಿಚಯ ಇರುತ್ತದೆ ಎಂದರೆ ಸರಿ. ಪೋಲೀಸರು ತಯಾರಿಸಿಕೊಂಡು ಬಂದ ಪಂಚನಾಮೆಗೆ ಅವರಿಗೆ ಸಹಾಯವಾಗಲಿ ಎಂದು ನಾನು ಆ ಎಲ್ಲಾ ಸ್ಥಳಗಳಿಗೆ ಹೋಗಿಲ್ಲದಿದ್ದರೂ ಸಹ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿಗಳು ಜೊತೆಗೆ ಇದ್ದು ಈ ಎಲ್ಲಾ ಜಾಗಗಳನ್ನು ತೋರಿಸಿದ್ದರು ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**1 ನೇ ಹೆ.ಪ್ರ.ದ.ನ್ಯಾ.ದಂ., ಶಿರಸಿ.**